**All India Radio: Bangalore**
**National Bulletin In Kannada**
**12.12.2025  19.35 p.m.**
**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

***************

ಮುಖ್ಯಾಂಶಗಳು

೧.  ೨೦೨೭ರ ಜನಗಣತಿಗೆ ಕೇಂದ್ರ ಬಜೆಟ್ ಅನುಮೋದನೆ; ಜನಗಣತಿಯೊಂದಿಗೆ ಜಾತಿಗಣತಿ - ಸಚಿವ ಅಶ್ವಿನಿ ವೈಷ್ಣವ್

೨.  ಲೋಕಸಭೆಯಲ್ಲಿಂದು ೨೦೨೫-೨೬ರ ಮೊದಲ ಹಂತದ ಅನುದಾನಗಳ ಪೂರಕ ಬೇಡಿಕೆ ಮತ್ತು ವಿನಿಯೋಗ ಮಸೂದೆ ಮಂಡನೆ

೩.  ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ನಡೆಯುತ್ತಿರುವ ರಾಜ್ಯಗಳಲ್ಲಿ ವಿಶೇಷ ವೀಕ್ಷಕರನ್ನು ನೇಮಿಸಿದ ಚುನಾವಣಾ ಆಯೋಗ

೪.  ಹತ್ತೊಂಬತ್ತು ವರ್ಷದೊಳಗಿನ ಏಷ್ಯಾ ಕಪ್ ಕ್ರಿಕೆಟ್; ಯುಎಇ ವಿರುದ್ಧ ಭಾರತ ತಂಡಕ್ಕೆ ಭರ್ಜರಿ ಗೆಲುವು

***************

೨೦೨೭ರ ಜನಗಣತಿಗಾಗಿ ೧೧ ಸಾವಿರದ ೭೧೮ ಕೋಟಿ ರೂಪಾಯಿಗಳ ಬಜೆಟ್ ಅನ್ನು ಕೇಂದ್ರ ಸಚಿವ ಸಂಪುಟ ಅಂಗೀಕರಿಸಿದೆ.

ಈ ಕುರಿತು ನವದೆಹಲಿಯಲ್ಲಿಂದು ಮಾಧ್ಯಮಗಳಿಗೆ ಮಾಹಿತಿ ನೀಡಿದ ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್, ೨೦೨೭ರ ಜನಗಣತಿಯನ್ನು ಎರಡು ಹಂತಗಳಲ್ಲಿ ನಡೆಸಲಾಗುವುದು. ಜಾತಿಗಣತಿಯನ್ನು ೨೦೨೭ರ ಜನಗಣತಿಯಲ್ಲಿ ಸೇರಿಸಲಾಗುವುದು ಎಂದು ತಿಳಿಸಿದರು.

೨೦೨೭ರ ಜನಗಣತಿಯು ಸರಣಿಯಲ್ಲಿ ೧೬ನೇ ಮತ್ತು ಸ್ವಾತಂತ್ರ್ಯದ ನಂತರ ೮ನೇ ಜನಗಣತಿಯಾಗಿದೆ. ಇದು ಮೊದಲ ಡಿಜಿಟಲ್ ಜನಗಣತಿಯಾಗಿದೆ. ಆಂಡ್ರಾಯ್ಡ್ ಮತ್ತು ಐಒಎಸ್ ಆವೃತ್ತಿಗಳಿಗೆ ಲಭ್ಯವಿರುವ ಮೊಬೈಲ್ ಅಪ್ಲಿಕೇಶನ್‌ಗಳನ್ನು ಬಳಸಿಕೊಂಡು ಮಾಹಿತಿಯನ್ನು

ಸಂಗ್ರಹಿಸಲಾಗುತ್ತಿದೆ. ೩೦ ಲಕ್ಷ ಕಾರ್ಯಕರ್ತರು ಈ ಜನಗಣತಿಯಲ್ಲಿ ಭಾಗಿಯಾಗಲಿದ್ದಾರೆ ಎಂದು ಸಚಿವರು ಮಾಹಿತಿ ನೀಡಿದರು.

೨೦೨೭ರ ಜನಗಣತಿ ದೇಶದ ಸಂಪೂರ್ಣ ಜನಸಂಖ್ಯೆಯನ್ನು ಒಳಗೊಳ್ಳುತ್ತದೆ. ಈ ಪ್ರಕ್ರಿಯೆಯಲ್ಲಿ ಪ್ರತಿ ಮನೆಗೂ ಕಾರ್ಯಕರ್ತರು ಭೇಟಿ ನೀಡಲಿದ್ದಾರೆ ಎಂದರು.

ಧ್ವನಿ: ಅಶ್ವಿನಿ ವೈಷ್ಣವ್

ಇನ್ನೊಂದೆಡೆ, ಕಲ್ಲಿದ್ದಲು ಸಂಪರ್ಕ ನೀತಿಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಕಲ್ಲಿದ್ದಲು ವಲಯದಲ್ಲಿ ಭಾರತ ಆತ್ಮನಿರ್ಭರತೆಯತ್ತ ಸಾಗುತ್ತಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

ಇದೇ ವೇಳೆ, ೨೦೨೬ರ ಹಂಗಾಮಿಗೆ ಕೊಬ್ಬರಿಗೆ ಕನಿಷ್ಠ ಬೆಂಬಲ ಬೆಲೆಗೆ ಕೇಂದ್ರ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ. ತುಂಡು ಕೊಬ್ಬರಿಯ ಕನಿಷ್ಠ ಬೆಂಬಲ ಬೆಲೆಯನ್ನು ಪ್ರತಿ ಕ್ವಿಂಟಾಲ್‌ಗೆ ೪೪೫ ರೂಪಾಯಿ ಹೆಚ್ಚಿಸಿ ೧೨ ಸಾವಿರದ ೨೭ ರೂಪಾಯಿ ನಿಗದಿಪಡಿಸಲಾಗಿದೆ.

ಉಂಡೆ ಕೊಬ್ಬರಿಯ ಕನಿಷ್ಠ ಬೆಂಬಲ ಬೆಲೆಯನ್ನು ೪೦೦ ರೂಪಾಯಿಗೆ ಹೆಚ್ಚಿಸಿ, ೧೨ ಸಾವಿರದ ೫೦೦ ರೂಪಾಯಿ ನಿಗದಿಪಡಿಸಲಾಗಿದೆ.

***************

ಲೋಕಸಭೆಯಲ್ಲಿಂದು ೨೦೨೫-೨೬ರ ಮೊದಲ ಹಂತದ ಅನುದಾನಗಳ ಪೂರಕ ಬೇಡಿಕೆ ಮತ್ತು ವಿನಿಯೋಗ ಮಸೂದೆಯನ್ನು ಪರಿಗಣನೆ ಹಾಗೂ ಅಂಗೀಕಾರಕ್ಕಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದರು.

ಒಂದು ಲಕ್ಷ ೩೨ ಸಾವಿರ ಕೋಟಿ ರೂಪಾಯಿಗಳ ಒಟ್ಟು ಹೆಚ್ಚುವರಿ ವೆಚ್ಚಕ್ಕಾಗಿ ಶಾಸನವು ಸಂಸತ್ತಿನ ಅನುಮೋದನೆಯನ್ನು ಸಹ ಬಯಸುತ್ತದೆ. ಇದರಲ್ಲಿ ರಸಗೊಬ್ಬರ ಸಬ್ಸಿಡಿಗಾಗಿ ೧೮ ಸಾವಿರ ಕೋಟಿ ರೂಪಾಯಿಗಿಂತ ಹೆಚ್ಚು ವೆಚ್ಚ ಸೇರಿದಂತೆ ೪೧ ಸಾವಿರದ ೪೪೫ ಕೋಟಿ ರೂಪಾಯಿಗಳ ವೆಚ್ಚದ ಪ್ರಸ್ತಾವನೆ ಸೇರಿವೆ.

ಚರ್ಚೆಯಲ್ಲಿ ಭಾಗವಹಿಸಿದ ಕಾಂಗ್ರೆಸ್ ಸಂಸದ ದೀಪೇಂದರ್ ಹೂಡಾ, ಜಿಡಿಪಿ ಬೆಳವಣಿಗೆಗೆ ಸರ್ಕಾರ ಬಳಸುತ್ತಿರುವ ಮಾನದಂಡಗಳನ್ನು ಪ್ರಶ್ನಿಸಿದರು. ಯುಪಿಎ ಆಡಳಿತಾವಧಿಯಲ್ಲಿ ಶೇಕಡ

೮ ರಷ್ಟು ಬೆಳವಣಿಗೆ ಕಂಡಿದ್ದ ಈ ಸೂತ್ರವು ೧೦ ವರ್ಷಗಳಲ್ಲಿ ಕೇವಲ ೫.೮ ರಷ್ಟು ಒಟ್ಟಾರೆ ಬೆಳವಣಿಗೆಗೆ ಕಾರಣವಾಗಿದೆ ಎಂದು ಆರೋಪಿಸಿದೆ.

ಇನ್ನೊಂದೆಡೆ ಬಿಜೆಪಿ ಸಂಸದ ಜಗದಾಂಬಿಕಾ ಪಾಲ್ ಮಾತನಾಡಿ, ರೈತರ ಆದಾಯವನ್ನು ದ್ವಿಗುಣಗೊಳಿಸಲು ಕೇಂದ್ರ ಸರ್ಕಾರ ಹಲವು ಯೋಜನೆಗಳು, ಪಿಎಂ ಕಿಸಾನ್ ಅಡಿಯಲ್ಲಿ ನೇರ ಲಾಭ ವರ್ಗಾವಣೆ ಮತ್ತು ಸಬ್ಸಿಡಿ ರಸಗೊಬ್ಬರಗಳು ರೈತರ ಜೀವನದಲ್ಲಿ ಸಂತೋಷವನ್ನು ತಂದಿವೆ. ಕಠಿಣ ಪರಿಶ್ರಮ ಪಡುವ ರೈತರು ಮತ್ತು ಕೇಂದ್ರ ಸರ್ಕಾರದ ನೀತಿಗಳಿಂದಾಗಿ ಗೋಧಿ ಮತ್ತು ಅಕ್ಕಿ ದಾಖಲೆಯ ಉತ್ಪಾದನೆ ದಾಖಲಿಸಿದೆ ಎಂದು ಹೇಳಿದರು.

**************

ಪ್ರಯಾಣಿಕರ ಸುರಕ್ಷತೆಯು ಭಾರತೀಯ ರೈಲ್ವೆಗೆ ಪ್ರಮುಖ ಆದ್ಯತೆಯಾಗಿದೆ. ದೇಶದಲ್ಲಿ ರೈಲ್ವೆ ಅಪಘಾತಗಳು ಶೇಕಡ ೯೦ರಷ್ಟು ತಗ್ಗಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ರಾಜ್ಯಸಭೆಯಲ್ಲಿಂದು ಪ್ರಶ್ನೊಂದಕ್ಕೆ ಲಿಖಿತ ಉತ್ತರ ನೀಡಿದ ಸಚಿವರು, ೨೦೦೪ ರಿಂದ ೨೦೧೪ ರಲ್ಲಿ ೧ ಸಾವಿರದ ೭೧೧ ರೈಲು ಅಪಘಾತಗಳು ಸಂಭವಿಸಿದ್ದು, ೨೦೨೪-೨೫ರಲ್ಲಿ ಇದು ೩೧ಕ್ಕೆ ಇಳಿದಿದೆ. ಅಪಘಾತಗಳನ್ನು ತಡೆಗಟ್ಟಲು ರೈಲ್ವೆ ಸಿಬ್ಬಂದಿ, ರೈಲ್ವೆ ರಕ್ಷಣಾ ಪಡೆ ಮತ್ತು ಪೊಲೀಸರು ಜಂಟಿಯಾಗಿ ಸೂಕ್ಷ್ಮ ಪ್ರದೇಶಗಳಲ್ಲಿ ಆಗಾಗ್ಗೆ ಗಸ್ತು ತಿರುಗುತ್ತಿದ್ದಾರೆ ಎಂದು ವಿವರಿಸಿದರು.

ಮಂಜು ಪೀಡಿತ ಪ್ರದೇಶಗಳಲ್ಲಿ ಲೋಕೊಪೈಲೆಟ್‌ಗಳಿಗೆ ಜಿಪಿಎಸ್ ಆಧರಿತ ಮಂಜು ಸುರಕ್ಷತಾ ಸಾಧನಗಳನ್ನು ಒದಗಿಸಲಾಗಿದೆ. ಲೆವೆಲ್ ಕ್ರಾಸಿಂಗ್ ಗೇಟ್‌ಗಳಲ್ಲಿ ಸುರಕ್ಷತೆಯನ್ನು ಹೆಚ್ಚಿಸಲು ಇದುವರೆಗೂ ೧೦ ಸಾವಿರಕ್ಕೂ ಹೆಚ್ಚು ಲೆವೆಲ್ ಕ್ರಾಸಿಂಗ್ ಗೇಟ್‌ಗಳಲ್ಲಿ ಇಂಟರ್‌ಲಾಕಿಂಗ್‌ಗಳನ್ನು ಅಳವಡಿಸಲಾಗಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ಮಾಹಿತಿ ನೀಡಿದರು.

**************

ದೇಶದಲ್ಲಿ ವಿಮಾನಗಳನ್ನು ತಯಾರಿಸುವ ಕಾರ್ಯವನ್ನು ಸರ್ಕಾರ ಪ್ರಾರಂಭಿಸಲಿದೆ. ದೇಶದಲ್ಲಿ ವಿಮಾನಗಳನ್ನು ತಯಾರಿಸಲು ತಂತ್ರಜ್ಞಾನಗಳನ್ನು ಪಡೆಯಲು ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್, ರಷ್ಯಾದ ವಿಮಾನ ಕಂಪನಿ - ಸುಖೋಯ್ ಎಸ್‌ಜೆ ೧೦೦ ನೊಂದಿಗೆ ಅನ್ವೇಷಿಸುತ್ತಿದೆ ಎಂದು ನಾಗರಿಕ ವಿಮಾನಯಾನ ಸಚಿವ ಕೆ. ರಾಮಮೋಹನ್ ನಾಯ್ಡು ತಿಳಿಸಿದ್ದಾರೆ.

ಲೋಕಸಭೆಯಲ್ಲಿಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದ ಸಚಿವರು, ಕೆಲವು ಜಾಗತಿಕ ಕಂಪನಿಗಳು ಈ ವಿಮಾನಗಳನ್ನು ತಯಾರಿಸುತ್ತಿರುವುದರಿಂದ ವಿಮಾನಗಳ ಲಭ್ಯತೆಯು ಗಂಭೀರ ಸಮಸ್ಯೆಯಾಗಿದೆ ಎಂದು ಹೇಳಿದರು.

***************

ಪಶ್ಚಿಮ ಬಂಗಾಳ, ತಮಿಳುನಾಡು, ಉತ್ತರಪ್ರದೇಶ, ಕೇರಳ ಸೇರಿದಂತೆ ೮ ಪ್ರಮುಖ ರಾಜ್ಯಗಳಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆಯನ್ನು ಮೇಲ್ವಿಚಾರಣೆ ಮಾಡಲು ಚುನಾವಣಾ ಆಯೋಗ ವಿಶೇಷ ವೀಕ್ಷಕರು-ಎಸ್‌ಆರ್‌ಓ ಗಳನ್ನು ನೇಮಿಸಿದೆ.

ಈ ಎಸ್‌ಆರ್‌ಓಗಳು ಈಗಾಗಲೇ ತಮ್ಮ ಕೆಲಸಗಳನ್ನು ಪ್ರಾರಂಭಿಸಿದ್ದಾರೆ. ೨೦೨೬ರ ಫೆಬ್ರವರಿಯಲ್ಲಿ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸುವವರೆಗೆ ಈ ರಾಜ್ಯಗಳಲ್ಲಿ ವಾರದಲ್ಲಿ ಎರಡು ದಿನ ಎಸ್‌ಆರ್‌ಓಗಳು ಹಾಜರಿರಲಿದ್ದಾರೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಎಸ್‌ಆರ್‌ಓಗಳು ಎಲ್ಲ ರಾಷ್ಟ್ರೀಯ ಮತ್ತು ರಾಜ್ಯ ರಾಜಕೀಯ ಪಕ್ಷಗಳ ರಾಜ್ಯ ಮಟ್ಟದ ಹಾಗೂ ಜಿಲ್ಲಾ ಮಟ್ಟದ ನಾಯಕರೊಂದಿಗೆ ಸಭೆಗಳನ್ನು ನಡೆಸಲಿದ್ದಾರೆ. ಸಂಪೂರ್ಣ ಪ್ರಕ್ರಿಯೆಯು ಸುಗಮ, ಪಾರದರ್ಶಕವಾಗಿ ನಡೆಯುವಂತಾಗಲು ಎಸ್‌ಆರ್‌ಓಗಳು ಈ ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿ ಮತ್ತು ಜಿಲ್ಲಾ ಚುನಾವಣಾ ಅಧಿಕಾರಿಗಳೊಂದಿಗೆ ವರ್ಚುಯಲ್ ಅಥವಾ ಭೌತಿಕವಾಗಿ ನಡೆಯುವ ಸಭೆಗಳಲ್ಲಿ ಹಾಜರಿರುತ್ತಾರೆ.

ಯಾವುದೇ ಅರ್ಹ ಮತದಾರರು ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ಮತ್ತು ಯಾವುದೇ ಅನರ್ಹ ವ್ಯಕ್ತಿಯು ಮತದಾರ ಪಟ್ಟಿಯಲ್ಲಿ ಸೇರ್ಪಡೆಯಾಗದಂತೆ ಎಸ್‌ಆರ್‌ಓಗಳು ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯ ಮೇಲ್ವಿಚಾರಣೆ ನಡೆಸಲಿದ್ದಾರೆ ಎಂದು ಚುನಾವಣಾ ಆಯೋಗ ತಿಳಿಸಿದೆ.

***************

ಆಕಾಶವಾಣಿ, ದೂರದರ್ಶನ ಅಥವಾ ಅದರ ಒಟಿಸಿ ಫ್ಲಾಟ್‌ಪಾರಂ ವೇವ್ಸ್‌ನಲ್ಲಿ ಪ್ರಸಾರ ಮಾಡಲು ಪ್ರಸಾರ ಭಾರತಿಯು, ತ್ರಿಲೋಕ್ ಎಂಬ ಎಐ ರಚಿತ ಸಂಗೀತ ಬ್ಯಾಂಡ್‌ನೊಂದಿಗೆ ಯಾವುದೇ ಸಹಯೋಗ ಮಾಡಿಕೊಂಡಿಲ್ಲ ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ.ಎಲ್.ಮುರುಗನ್ ಸ್ಪಷ್ಟಪಡಿಸಿದ್ದಾರೆ.

ರಾಜ್ಯಸಭೆಯಲ್ಲಿಂದು ಪ್ರಶ್ನೊಂದಕ್ಕೆ ಲಿಖಿತ ಉತ್ತರ ನೀಡಿದ ಸಚಿವರು, ಈ ವರ್ಷದ ನವರಾತ್ರಿ ಉತ್ಸವದ ಸಂದರ್ಭದಲ್ಲಿ ವೇವ್ಸ್ ಒಟಿಟಿ ಫ್ಲಾಟ್‌ಪಾರಂ ಸೇರಿದಂತೆ ಪ್ರಸಾರ ಭಾರತಿ ಜಾಲದಲ್ಲಿ ಕೆಲವು ಎಐ ರಚಿತ ಭಕ್ತಿಗೀತೆಗಳನ್ನು ಪ್ರಸಾರ ಮಾಡಲಾಗಿದೆ. ಯಾವುದೇ ಸಹಯೋಗವಿಲ್ಲದೇ ಕೇವಲ ಇದನ್ನು ಪ್ರಾಯೋಗಿಕ ಆಧಾರದ ಮೇಲೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

***************

ದುಬೈನ ಐಸಿಸಿ ಅಕಾಡಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಎಸಿಸಿ ಪುರುಷರ ೧೯ ವರ್ಷದೊಳಗಿನ ಏಷ್ಯಾ ಕಪ್ ಕ್ರಿಕೆಟ್‌ನ ಎ ಗುಂಪಿನ ಪಂದ್ಯದಲ್ಲಿ ಯುಎಇ ವಿರುದ್ಧ ಭಾರತ ೨೩೪ ರನ್‌ಗಳ ಭಾರೀ ಜಯ ದಾಖಲಿಸಿದೆ.

ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ ೫೦ ಓವರ್‌ಗಳಲ್ಲಿ ೬ ವಿಕೆಟ್ ನಷ್ಟಕ್ಕೆ ೪೩೩ ರನ್ ಮಾಡಿತು. ಈ ಗುರಿ ಬೆನ್ನತ್ತಿದ ಯುಎಇ ತಂಡ ೫೦ ಓವರ್‌ಗಳಲ್ಲಿ ೭ ವಿಕೆಟ್ ನಷ್ಟಕ್ಕೆ ೧೯೯ ರನ್ ಗಳಿಸಲಷ್ಟೇ ಶಕ್ತವಾಯಿತು.

*******ಮುಕ್ತಾಯ********